**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ</u>**

ಸಿ.ಸಿ.ನಂಃ 1007/2018

ಚಾಸಾಃ( 17 ) ಪ್ರಾಸಾ ( 11 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 18-06-2024.

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜ |
| ತಂದೆ ಹೆಸರು | ಯಮನಪ್ಪ |
| ವಯಸ್ಸು | 25 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಗುನ್ನಾಳ |

**<u>ಮುಖ್ಯ ವಿಚಾರಣೆಃ ಸಸಅ ರವರಿಂದ:</u>**

ನನಗೆ ಚಾಸಾ- 1, 8 ರಿಂದ 18 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇರುತ್ತದೆ. 2018 ನೇ ಪೆಬ್ರುವರಿ ತಿಂಗಳಲ್ಲಿ ನನ್ನ ಅಣ್ಣ ಗವಿಸಿದ್ದಪ್ಪ ಮತ್ತು ಶೃತಿ ವಿವಾಹವು ಗುನ್ನಾಳ ಗ್ರಾಮದ ಈಶ್ವರ ದೇವಸ್ಥಾನದಲ್ಲಿ ನೇರವೇರಿದ್ದು, 3 ದಿನಗಳ ನಂತರ ವದುವನ್ನು ಗಂಡನ ಮನೆಗೆ ಕರೆದುಕೊಂಡು ಹೋಗುವಾಗ ಹಟ್ಟಿ ಕ್ರಾಸ್ ಬಳಿ ಅಪೆ ಅಟೋದಲ್ಲಿ ಶೃತಿ, ಚನ್ನಮ್ಮ, ರವಿ, ಕಳಕೇಶ, ಕವಿತಾ , ಮಂಜುಳಾ, ಸರೋಜಮ್ಮ, ಯಮನಪ್ಪ ರವರು ಹೋಗುತ್ತಿದ್ದಾಗ ಕುಷ್ಟಗಿ ಕಡೆಯಿಂದ ಬುಲೇರಾ ವಾಹನ ಒಂದು ಬಂದು ಓವರಟೇಕ್ ಮಾಡುವಾಗ ಸದರಿ ಅಟೋಕ್ಕೆ ತಗುಲಿದ್ದು, ಅಗ ಅಟೋರಿಕ್ಷಾವು ಪಲ್ಟಿಯಾಗಿದ್ದು, ಸದರಿ ಅಪಘಾತದಿಂದ ಮೃತ ಪಾಲಿಕೆಮ್ಮ ಸ್ಥಳದಲ್ಲಿ ಮೃತ ಪಟ್ಟಿರುತ್ತಾಳೆ. ಉಳಿದ ಜನರಿಗೆ ರಕ್ತ ಗಾಯಾಗಳಾಗಿರುತ್ತವೆ.

2. ಅಸಮಯದಲ್ಲಿ ನಾನು ನನ್ನ ಮೋಟಾರ್ ಸೈಕಲ್ ನಲ್ಲಿ ಅಟೋದ ಹಿಂಭಾಗದಲ್ಲಿ ಬರುತ್ತಿದ್ದೇನು. ನಂತರ ಅಂಬುಲೇನ್ಸನಲ್ಲಿ ಕೊಪ್ಪಳದ ಜಿಲ್ಲಾ ಅಸ್ಪತ್ರೆಗೆ ಕರೆ ತರಲಾಗಿರುತ್ತದೆ. ಸದರಿ ಅಪಘಾತ ಮಾಡಿದ ಬುಲೇರಾ ವಾಹನ ಸಂಖ್ಯೆ ನನಗೆ ನೆನಪು ಇಲ್ಲ. ಸರ್ಕಾರಿ ಅಸ್ಪತ್ರೆಗೆ ಪೋಲಿಸರು ಬಂದು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಅಪಘಾತವಾದ ಮರುದಿನ ನನನ್ನು ಪೋಲಿಸ್ ಠಾಣೆಗೆ ಕರೆದಿದ್ದು, ಅ ಸಮಯದಲ್ಲಿ ನಮಗೆ ಬುಲೇರಾ ವಾಹನದ ಚಾಲಕನನ್ನು ತೋರಿಸಿರುತ್ತಾರೆ. ಅತನ ಹೆಸರು ದುರ್ಘನಾನ ಎಂದು ತಿಳಿಸಿದ್ದು, ನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಸದರಿ ವ್ಯಕ್ತಿಯಾಗಿರುತ್ತಾನೆ .

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸಸಅ ರವರಿಂದಃ</u>**

ದಿಃ 16-02-2018 ರಂದು ಸಂಜೆ 7.30 ರ ಸಮಾರಿಗೆ ಅಟೋ ರಿಕ್ಷಾದಲ್ಲಿ ಹಟ್ಟಿ ಕ್ರಾಸ್ ಬಳಿಚಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ ಎಂದರೆ ಸರಿ. ಬುಲೇರಾ ವಾಹನದ ನೊಂದಣಿ ಸಂಖ್ಯೆಃ ಕೆಎ 37 ಎ 8222 ಅಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ . ಅಪಘಾತವಾದ ನಂತರ ಬುಲೇರಾ ವಾಹನದ ಚಾಲಕ ಅಪಘಾತದ ಸ್ಥಳದಲ್ಲಿ ವಾಹನ ಬಿಟ್ಟು ಹೋಗಿರುತ್ತಾನೆ ಎಂದರೆಸರಿ. ಅಪಘಾತವಾನ್ನು ನಾನು ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ ಎಂದರೆ ಸರಿ. ಆಟೋ ರಿಕ್ಷಾವು ಅಪಘಾತದ ನಂತರ ಬಲ ಭಾಗಕ್ಕೆ ಪಲ್ಟಿಯಾಗಿ ನಂತರ ಎಡಭಾಗಕ್ಕೆ ಬಿದಿರುತ್ತದೆ ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರ ಮುಂದೆ ದಿಃ 17-02-2018 ರಂದು ಹೇಳಿಕೆಯನ್ನು ಮತ್ತು ದಿಃ 20-02-2018 ರಂದು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವು ಬುಲೇರಾ ವಾಹನದ ಚಲಾಕನು ಅತೀವೇಗವಾಗಿ ಮತ್ತು ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ಅಗಿರುತ್ತದೆ ಎಂದರೆ ಸರಿ.

## ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ

ಗುನ್ನಾಳು ಮತ್ತು ವಣಬಳ್ಳಾರಿ ಸುಮಾರು 17-18 ಕಿ.ಮೀ ಅಂತರವಾಗುತ್ತದೆ. ವಣಬಳ್ಳಾರಿಯಿಂದ ಸಂಗಾಪೂರಕ್ಕೆ ಸುಮಾರು 13 ಕಿ.ಮೀ ಅಗುತ್ತದೆ. ವಣಬಳ್ಳಾರಿಯಿಂದ ಗುನ್ನಾಳು ಮತ್ತು ಸಂಗಪೂರಕ್ಕೆ ತಲುಪಲು ಬೇರೆ ಬೇರೆ ರಸ್ತೆಗಳು ಇರುತ್ತವೆ ಎಂದರೆ ಸರಿ. ನಾನು ಘಟನೆಯ ದಿನ ಸಂಗಪೂರಕ್ಕೆ ಹೋಗುತ್ತಿದ್ದೇನು. ನಾನು ವಣಬಳ್ಳಾರಿಯನ್ನು ಸಂಜೆ 06.00 ಗಂಟೆಗೆ ಬಿಟ್ಟು ನಾನು ಒಬ್ಬನೇ ಬೈಕಿನಲ್ಲಿ ಹೋಗುತ್ತಿದ್ದೇನು.

2. ಗುನ್ನಜಾಗದಲ್ಲಿ ಬೀದಿ ದ್ವಿಪದ ವ್ಯವಸ್ಥೆ ಇರಲಿಲ್ಲ ಎಂದರೆ ಸರಿ. ಹಟ್ಟಿ ಕ್ರಾಸ್ ನಿಂದ ಅರ್ಧ ಕಿ.ಮೀ ಹಿಂದೆ ಅಪಘಾತವಾಗಿರುತ್ತದೆ. ಗುನ್ನಜಾಗದ ರಸ್ತೆಯು ಏರಿಳಿತ ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗುನ್ನಜಾಗದ ಸ್ವಲ್ಪ ದೂರದಲ್ಲಿ ಏರಿಳಿತ ರಸ್ತೆ ಇರುವುದಾಗಿ ನುಡಿಯುತ್ತಾರೆ. ಅಪಘಾತವಾದ ರಸ್ತೆ ಏರಿಳಿತ ರಸ್ತೆ ಇದ್ದು ಎದುರುಗಡೆ ಬರುವ ವಾಹನಗಳು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತರು ಬರುತ್ತಿದ್ದ ವಾಹನವು ಗೂಡ್ಸ ಅಟೋವಾಗಿತ್ತು ಎಂದರೆ ಸರಿ . ಸದರಿ ಅಟೋದಲ್ಲಿ ಸುಮಾರು 15 ಜನರು ಇದ್ದರು. ಸದರಿ ಅಟೋ ಡ್ರೈವರ್ ಸೀಟ್ ನಲ್ಲಿ ಚಾಲನನ್ನು ಸೇರಿ ಎರಡು ಜನರು ಕುಳಿತಿದ್ದರು. ಸದರಿ ಅಟೋವು ವಣಬಳ್ಳಾರಿಯನ್ನು ಬಿಟ್ಟಾಗ ಸಂಜೆ 06.00 ಗಂಟೆಯಾಗಿತ್ತು.

3. ಪೋಲಿಸ್ ಠಾಣೆಯಲ್ಲಿ ಹೇಳಿದ ನಂತರ ಅರೋಪಿಯೇ ಸದರಿ ಬುಲೇರಾ ವಾಹನದ ಚಾಲಕನಾಗಿದ್ದನು ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಒಂದು ಬಾರಿ ಪೋಲಿಸ್ ಠಾಣೆಗೆ ಅಪಘಾತವಾದ ಮರು ದಿನ ಹೋಗಿರುತ್ತೇನೆ. ಪೋಲಿಸರು ಗುನ್ನಜಾಗವನ್ನು ತೋರಿಸುವಂತೆ ನನನ್ನು ಕರೆದುಕೊಂಡು ಹೋಗಿರುತ್ತಾರೆ. ನಂತರ ಗುನ್ನಜಾಗದಲ್ಲಿ ಪೋಟೊವನ್ನು ತೆಗೆದಿರುತ್ತಾರೆ. ಅದದನಂತರ ನನ್ನ ಹೇಳಿಕೆಯನ್ನು ಪೋಲಿಸರರು ಪಡೆದಿರುವುದಿಲ್ಲ ಎಂದರೆ ಸರಿ. ಪೋಲಿಸರು ನನ್ನ ಮುಂದೆ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸರು ನನ್ನ ಸಹಿಯನ್ನುಪಡೆದು ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಪಡೆದಿದ್ದು ಸಮಯ ನನಗೆ ನೆನಪು ಇಲ್ಲ. ನಾನು ಅಟೋ ರಿಕ್ಷಾದ ಹಿಂದೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಟೋ ಚಾಲಕನಿಗೆ ಡಿ ಎಲ್

ಇಲ್ಲದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 13 ನನ್ನ ತಾಯಿಯಾಗಿದ್ದು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪರಿಹಾರ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ನಂತರ ಬುಲೇರಾ ವಾಹನದ ಚಾಲಕನನ್ನು ನೋಡಿಲ್ಲ ಎಂದರೆ ಸರಿ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**